| | |
|---|---|
| ಪ್ರಾಸಾ | 19 |
| ಚಾಸಾ | 35 |

ಕರ್ನಾಟಕ ಸರ್ಕಾರ (ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ:57)
ನಮೂನೆ ಸಂಖ್ಯೆ 4
(ಸಿವಿಲ್)

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ**

**ವಿಶೇಷ ಸತ್ರ ಪ್ರಕರಣ ಸಂಖ್ಯೆ: 123/2023**

**ದಿನಾಂಕ: 16.12.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಿತು.**

| | | |
|---|---|---|
| ಸಾಕ್ಷಿದಾರರ ಹೆಸರು | : | ರಮೇಶ್ |
| ತಂದೆ ಹೆಸರು | : | ನಂಜುಂಡಪ್ಪ |
| ವಯಸ್ಸು | : | 49 ವರ್ಷ |
| ಉದ್ಯೋಗ | : | ಪಿ.ಡಿ.ಓ., ಕೊತ್ತನೂರು ಗ್ರಾಮ ಪಂಚಾಯ್ತಿ |
| ವಾಸಸ್ಥಳ | : | ಚಿಂತಾಮಣಿ |

**ಮುಖ್ಯ ವಿಚಾರಣೆ: ಸಾರ್ವಜನಿಕ ಅಭಿಯೋಜಕರಿಂದ:-**

1. ಜನವರಿ 2023 ರಿಂದ ಸೆಪ್ಟೆಂಬರ್ 2023 ರ ತನಕ ಅಬ್ಲೋಡು ಗ್ರಾಮ ಪಂಚಾಯ್ತಿಯಲ್ಲಿ ಪಿ.ಡಿ.ಓ. ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿ: 29.08.2023 ರಂದು ತಾಲ್ಲೂಕು ಪಂಚಾಯ್ತಿ ಕಾರ್ಯನಿರ್ವಹಣಾಧಿಕಾರಿಗಳು ಶಿಡ್ಲಘಟ್ಟ ತಾಲ್ಲೂಕಿನ ಬೆಳೂಟ್ಟಿ ಗೇಟಿಗೆ

| | |
|---|---|
| ಪ್ರಾಸಾ | 19 |
| ಚಾಸಾ | 35 |

ಬರುವಂತೆ ನನಗೆ ತಿಳಿಸಿದ್ದರು. ನಾನು ಹಾಗೂ ಚಾಸಾ-34 ರವರು ಸದರಿ ಬೆಳೂಟ್ಟಿಗೆ ಗೇಟಿಗೆ ಬಂದಾಗ ಅಲ್ಲಿ ಕಾರ್ಯನಿರ್ವಹಣಾಧಿಕಾರಿಗಳಿದ್ದರು. ಸದರಿ ಕಾರ್ಯನಿರ್ವಹಣಾಧಿಕಾರಿಗಳು ಡಿ.ವೈ.ಎಸ್.ಪಿ. ಹಾಗೂ ಪೊಲೀಸರು ಒಂದು ಕೊಲೆ ಪ್ರಕರಣದಲ್ಲಿ ಬರುತ್ತಿದ್ದಾರೆಂದು ಅವರಿಗೆ ಸಹಕರಿಸಬೇಕೆಂದು ತಿಳಿಸಿ ಹೊರಟು ಹೋಗಿರುತ್ತಾರೆ.

**3.** ನಂತರ ಸದರಿ ಡಿ.ವೈ.ಎಸ್.ಪಿ. ಹಾಗೂ ಪೊಲೀಸರು ಬೆಳೂಟ್ಟಿಗೆ ಗೇಟಿಗೆ ಬಂದಿರುತ್ತಾರೆ. ಅವರು ತಮ್ಮನ್ನು ಹಿಂಭಾಲಿಸುವಂತೆ ನಮಗೆ ಸೂಚನೆ ನೀಡಿರುತ್ತಾರೆ. ಸದರಿ ಡಿ.ವೈ.ಎಸ್.ಪಿ. ಹಾಗೂ ಪೊಲೀಸರು ಬೆಳೂಟ್ಟಿ ಗೇಟ್ ಬಳಿಯಲ್ಲಿ ಮಾಡಿದ್ದ ಒಂದು ಬಡಾವಣೆಯಲ್ಲಿನ ನಿವೇಶನದ ಬಳಿ ಕರೆದುಕೊಂಡು ಹೋಗಿದ್ದರು. ಸದರಿ ಪೊಲೀಸರು ಒಬ್ಬ ವ್ಯಕ್ತಿಯನ್ನು ಕರೆದುಕೊಂಡು ಬಂದಿದ್ದರು. ಸದರಿ ವ್ಯಕ್ತಿಯನ್ನು ಪೊಲೀಸರು ಕರೆದುಕೊಂಡು ಹೋಗಿ ನಿವೇಶನದ ಬಳಿ ಮದ್ಯಪಾನ ಮಾಡಿದ್ದರೆಂದು ಪೊಟೋ ತೆಗೆದುಕೊಂಡಿರುತ್ತಾರೆ. ಸದರಿ ಸ್ಥಳದಲ್ಲಿ ಮಹಜರ್ ಕ್ರಮ ಜರುಗಿಸಿ ನಮ್ಮ ಸಹಿ ಪಡೆದಿರುತ್ತಾರೆ. ಕೊಲೆ ಮಾಡುವ ಮೊದಲು ಮದ್ಯಪಾನ ಮಾಡಿ ಸದರಿ ಸ್ಥಳದಲ್ಲಿ ಮಾತನಾಡಿಕೊಂಡಿದ್ದ

| | |
|---|---|
| ಪ್ರಾಸಾ | 19 |
| ಚಾಸಾ | 35 |

ಸ್ಥಳವೆಂದು, ಸದರಿ ಸ್ಥಳದಲ್ಲಿ ಮಹಜರ್ ಕ್ರಮ ಜರುಗಿಸಿದ್ದರು. ಬೇರೆ ವಿವರಣೆಯನ್ನು ನಾನು ಸ್ಥಳದಲ್ಲಿ ಕೇಳಿಸಿಕೊಂಡಿಲ್ಲ. ಸದರಿ ಮಹಜರ್ ಕ್ರಮವನ್ನು ಬೆಃ 10.00 ರಿಂದ 11.00 ಗಂಟೆ ತನಕ ಮಾಡಿಕೊಂಡಿದ್ದರು. ಸದರಿ ಸಮಯದಲ್ಲಿ ಪೊಟೋ ತೆಗೆದುಕೊಂಡಿದ್ದರು. ಸಾಕ್ಷಿಗೆ ಮಹಜರ್ ನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಮಹಜರ್ ನ್ನು ನಿಪಿ 46 ಎಂದು, ಸಾಕ್ಷಿ ಸಹಿಯನ್ನು ನಿಪಿ 46(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಪೊಟೋವನ್ನು ತೋರಿಸಲಾಗಿ, ಸದರಿ ಪೊಟೋವನ್ನು ನಿವೇಶನದ ಬಳಿ ತೆಗೆಯಲಾಗಿದೆ ಎಂದು, ಅದರಲ್ಲಿ ತಾನು ಹಾಗೂ ಚಾಸಾ-34, ಹಾಗೂ ಒಬ್ಬ ಆರೋಪಿ ಇದ್ದಾರೆಂದು ಗುರುತಿಸಿರುತ್ತಾರೆ. ಸದರಿ ಪೊಟೋವನ್ನು ನಿಪಿ 47 ಎಂದು ಗುರುತಿಸಲಾಯಿತು.

**4.** ಸದರಿ ಆ ದಿನ ಪೊಲೀಸರು ಕರೆದುಕೊಂಡು ಬಂದ ವ್ಯಕ್ತಿಯನ್ನು ನೋಡಿದರೆ ಗುರುತಿಸುತ್ತೆನೆ. ಸಾಕ್ಷಿಯು 5 ನೇ ಆರೋಪಿ ಅರುಣ್ ಕುಮಾರ್ ರವರನ್ನು ನೋಡಿ ಸದರಿ ಆರೋಪಿ ಇರಬಹುದು ಎಂದು ಹೇಳಿರುತ್ತಾರೆ.

| | |
|---|---|
| ಪ್ರಾಸಾ | 19 |
| ಚಾಸಾ | 35 |

**(ಈ ಹಂತದಲ್ಲಿ ವಿಶೇಷ ಸಾರ್ವಜನಿಕ ಅಭಿಯೋಜಕರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದರು. ಅಭಿಯೋಜಕರಿಗೆ ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ವಿಶೇಷ ಸಾರ್ವಜನಿಕ ಅಭಿಯೋಜಕರಿಂದಃ-**

**5.** ಸದರಿ ದಿನದಂದು ನಾರ್ತ್ ಈಸ್ಟ್ ಪ್ರಾಪರ್ಟೀಸ್ ರವರ ಖಾಲಿ ನಿವೇಶನದ ಬಳಿ ಹೋಗಿದ್ದೆವು ಎಂದರೆ ಸಾಕ್ಷಿಯು ಇರಬಹುದು ಎಂದು ಹೇಳುತ್ತಾರೆ. ಆ ಸಮಯದಲ್ಲಿ 1 ನೇ ಆರೋಪಿ-ಪ್ರಮೋದ್ ಪೊಲೀಸರ ವಶದಲ್ಲಿದ್ದನು ಎಂದರೆ ಸಾಕ್ಷಿಯು ಆ ದಿನ ಪೊಲೀಸರು ಆರೋಪಿಯ ಹೆಸರನ್ನು ನನಗೆ ಹೇಳಿಲ್ಲ ಎಂದು ಹೇಳುತ್ತಾರೆ. ಸದರಿ ನಿವೇಶನದ ಬಳಿ ತಾನು ಹಾಗೂ ಇತರ ಆರೋಪಿತರು ಸೇರಿಕೊಂಡು ನಾರಾಯಣಸ್ವಾಮಿರವರನ್ನು ಕೊಲೆ ಮಾಡಲು ಸಂಚು ರೂಪಿಸಿದ ಸ್ಥಳವೆಂದು ಸದರಿ 1 ನೇ ಆರೋಪಿ ಸ್ಥಳವನ್ನು ತೋರಿಸಿದರು ಎಂದರೆ ಸಾಕ್ಷಿಯು ಸ್ಥಳವನ್ನು ತೋರಿಸಿದರು ಎಂದು ಹೇಳುತ್ತಾರೆ. 1 ನೇ ಆರೋಪಿಯನ್ನು ನಾನು ಆ ದಿನ ಗುರುತಿಸಿದ್ದರೂ ಸಹ ಈ ದಿನ ನಾನು 5 ನೇ ಆರೋಪಿಯನ್ನು ಆ ದಿನ ಕರೆದುಕೊಂಡು ಬಂದಿದ್ದರೆಂದು ಅವರನ್ನು ಗುರುತಿಸಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು, ಆ ದಿನ ಪೊಲೀಸರು ಕರೆದುಕೊಂಡು ಬಂದಿದ್ದ ಆರೋಪಿಯು ಕಪ್ಪು ಬಣ್ಣದ ಟೀ ಶರ್ಟ್ ಹಾಗೂ ನಿಕ್ಕರ್ ನ್ನು ಧರಿಸಿದ್ದರು ಎಂದು ಹೇಳುತ್ತಾರೆ. 1 ನೇ ಆರೋಪಿಯನ್ನು ಪೊಲೀಸರು ಕರೆದುಕೊಂಡು ಬಂದಿದ್ದರೂ

| | |
|---|---|
| ಪ್ರಾಸಾ | 19 |
| ಚಾಸಾ | 35 |

ಸಹ 5 ನೇ ಆರೋಪಿಯನ್ನು ಕರೆದುಕೊಂಡು ಬಂದಿದ್ದರೆಂದು ಗುರುತಿಸಿ, ಸರ್ಕಾರಿ ಅಧಿಕಾರಿಯಾಗಿದ್ದರೂ ಸಹ ಆರೋಪಿತರೊಂದಿಗೆ ಶಾಮಿಲ್ ಆಗಿ ಸರ್ಕಾರದ ವಿರುದ್ದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸಾಕ್ಷಿ ಈ ಹಂತದಲ್ಲಿ 1 ನೇ ಆರೋಪಿ ಪ್ರಮೋದ್ ನನ್ನು ಪೊಲೀಸರು ಕರೆದುಕೊಂಡು ಬಂದಿರಬಹುದು ಎಂದು ಹೇಳುತ್ತಾರೆ.

**<u>ಪಾಟೀ ಸವಾಲು: 1 ರಿಂದ 4 ನೇ ಆರೋಪಿತರ ಪರ ಶ್ರೀಎಂ.ಜಿ.ಎಸ್.ಆರ್ ವಕೀಲರಿಂದ:</u>**

**6.** ಪಂಚನಾಮೆ ನೋಟೀಸ್ ನ್ನು ನನಗೆ ಸ್ಥಳದಲ್ಲಿ ನೀಡಿದ್ದರು. ನಾನು ಹಾಗೂ ಚಾಸಾ-34 ರವರು ದ್ವಿಚಕ್ರ ವಾಹನದಲ್ಲಿ ಬೆಳೊಟ್ಟಿಗೆ ಗೇಟಿಗೆ ಬಂದಿದ್ದೆವು. ಸದರಿ ನಿವೇಶನದ ಬಳಿ ನಮಗೂ, ಪೊಲೀಸರು ಕರೆದುಕೊಂಡು ಬಂದ ಆರೋಪಿಗೂ ಮಾತುಕತೆಯಾಗಿಲ್ಲ. ನನ್ನ ಸಮಕ್ಷಮದಲ್ಲಿ ಆರೋಪಿ ಹಾಗೂ ಪೊಲೀಸರು ಮಾತನಾಡಿಕೊಳ್ಳುತ್ತಿದ್ದರು, ಅದನ್ನು ನಾನು ಕೇಳಿಸಿಕೊಂಡಿದ್ದೆನೆ. ಸದರಿ ಆರೋಪಿ ಯಾರ ಜೊತೆ ಮದ್ಯಪಾನ ಮಾಡಿದ್ದೆನೆಂದು ಅಲ್ಲಿ ಹೇಳಿಲ್ಲ. ಸದರಿ ಸ್ಥಳದಲ್ಲಿ ಗಾಜಿನ ಚೂರುಗಳು ಬಿದ್ದಿದ್ದವು. ಸದರಿ ಬಡಾವಣೆಗೆ ಜನ ಹೋಗಿ ಬರಬಹುದು ಎಂದರೆ ಸರಿ. ಸದರಿ ಬಡಾವಣೆಯಲ್ಲಿ ರಸ್ತೆ ಠಾರ್ ರಸ್ತೆಯಾಗಿತ್ತು. ಪೊಟೋವನ್ನು ನಿವೇಶನದ ಎದುರುಗಡೆ ತೆಗೆಯಲಾಗಿದೆ.

| | |
|---|---|
| ಪ್ರಾಸಾ | 19 |
| ಚಾಸಾ | 35 |

**7.** ನಾವು ಕಚೇರಿಯಿಂದ ಹೊರಹೋಗುವ ಸಮಯದಲ್ಲಿ ಮೂಮೆಂಟ್ ರಿಜಿಸ್ಟರ್ ನಲ್ಲಿ ಸಹಿ ಮಾಡಿ ಹೋಗುತ್ತೆವೆ. ಸದರಿ ಕಾರ್ಯನಿರ್ವಹಣಾಧಿಕಾರಿಗಳು ನಮ್ಮನ್ನು ಕರೆದಿದ್ದುದರಿಂದ ಆ ದಿನ ಮೂಮೆಂಟ್ ರಿಜಿಸ್ಟರ್ ನಲ್ಲಿ ಸಹಿ ಮಾಡಿಲ್ಲ. ಸಾಕ್ಷಿ ಮುಂದುವರೆದು, ಸದರಿ ಮಹಜರ್ ಪ್ರಕ್ರಿಯೆ ಮುಗಿಸಿ ನಾವು ಕಚೇರಿಗೆ ಬೆಳಿಗ್ಗೆ 11.00 ಗಂಟೆ ಸಮಾರಿಗೆ ಹೋಗಿದ್ದೆವು ಎಂದು ಹೇಳುತ್ತಾರೆ. ನಮ್ಮ ಕಚೇರಿಯಲ್ಲಿ ಬಯೋಮೆಟ್ರಿಕ್ ಹಾಗೂ ಮ್ಯಾನುಯಲ್ ಅಟೆಂಡೆನ್ಸ್ ಇರುತ್ತದೆ. ನಾನು ಆ ದಿನ ಪಂಚನಾಮೆ ಪ್ರಕ್ರಿಯೆಗೆ ಹೋಗದೆ ಇದ್ದುದರಿಂದ ಮೂಮೆಂಟ್ ರಿಜಿಸ್ಟರ್ ನಲ್ಲಿ ಬರೆದಿಲ್ಲ ಎಂದರೆ ಸರಿಯಲ್ಲ. ಸ್ಥಳದಲ್ಲಿ ಪೊಟೋ ತೆಗೆದ ಬಗ್ಗೆ ಮಹಜರ್ ನಲ್ಲಿ ನಮೂದು ಮಾಡಿಲ್ಲ. ಸದರಿ ಮಹಜರ್ ಸಮಯದಲ್ಲಿ ಪೊಟೋ ತೆಗೆಯದೇ ಇದ್ದ ಕಾರಣದಿಂದ ಅದನ್ನು ಮಹಜರ್ ನಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ನಂತರದಲ್ಲಿ 1 ನೇ ಆರೋಪಿ ಪ್ರಮೋದ್ ನನ್ನು ಪೊಲೀಸರು ಕರೆದುಕೊಂಡು ಬಂದು ಅಲ್ಲಿ ಪೊಟೋ ತೆಗೆಸಿಕೊಂಡಿರುತ್ತಾರೆಂದರೆ ಸರಿಯಲ್ಲ. ನನಗೆ ಪಂಚನಾಮೆಗೆ ನೊಟೀಸ್ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ 46 ಮಹಜರ್ ನಲ್ಲಿ ನಾನು ಸಹಿಯನ್ನು ದಿಬ್ಬೂರಹಳ್ಳಿ ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೆನೆಂದರೆ ಸರಿಯಲ್ಲ.

| | |
|---|---|
| ಪ್ರಾಸಾ | 19 |
| ಚಾಸಾ | 35 |

**8.** ಸದರಿ ಬಡಾವಣೆಯಲ್ಲಿ ಸುಮಾರು 100 ಎಕರೆ ವಿಸ್ತೀರ್ಣದಲ್ಲಿದೆ ಎಂದರೆ ನನಗೆ ತಿಳಿದಿಲ್ಲ.

**ಪಾಟೀ ಸವಾಲು: 5 ನೇ ಆರೋಪಿ ಪರ ಶ್ರೀ ಕೆ ಎಂ ಎಂ ವಕೀಲರಿಂದ:**

1 ರಿಂದ 4 ನೇ ಆರೋಪಿತರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವಂತೆ ಕುಮಾರಿ ಇ.ವಿ. ವಕೀಲರು ಶ್ರೀ ಕೆ.ಎಂ.ಎಂ ವಕೀಲರ ಪರ ಕೋರುತ್ತಾರೆ. ಅವರ ಕೋರಿಕೆಯನ್ನು ಮನ್ನಿಸಿದೆ.

**ಪಾಟೀ ಸವಾಲು: 6 ನೇ ಆರೋಪಿ ಪರ ಶ್ರೀಹೆಚ್ ಸಿ ಪಿ ವಕೀಲರಿಂದ:**

1 ರಿಂದ 4 ನೇ ಆರೋಪಿತರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವಂತೆ 6 ನೇ ಆರೋಪಿ ಪರ ವಕೀಲರು ಕೋರುತ್ತಾರೆ. ಅವರ ಕೋರಿಕೆಯನ್ನು ಮನ್ನಿಸಿದೆ.

**ಮರುವಿಚಾರಣೆ: ಇಲ್ಲ.**

(ದಿನಾಂಕ: 16.12.2024 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ ಕೇ ಸರಿ ಇದೆ

(ಶಿವಪ್ರಸಾದ್?ಕೆ.ಬಿ.)
1 ನೇ ಹೆಚ್ಚುವರಿ ಜಿಲ್ಲಾ ಮತ್ತು (ವಿಶೇಷ) ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ